Ref.No. 243/15

WW-1,

ದಿನಾಂಕಃ 20-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ. ಜೆ ಪಿ ವಕೀಲರಿಂದಃ

2 ನೇ ಪಾರ್ಟಿ ನಂ.1 ರವರ ವಿರುದ್ದ ಎನ್ ಸಿ ಎಲ್ ಟಿ ಮುಂದೆ ಒಂದು ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿ . 2 ನೇ ಪಾರ್ಟಿ ನಂ.1 ಸಂಸ್ಥೆಗೆ ಸಂಬಂಧಪಟ್ಟಂತೆ ಪ್ರತ್ಯೇಕ ಯೂನಿಯನ್ ಇರಲಿಲ್ಲ ಎಂದರೆ ಸರಿ . ಈ ಪ್ರಕರಣದಲ್ಲಿ ಈ ನ್ಯಾಯಾಲಯ ಕ್ಕೆ ಬಂದ ನಂತರ 2 ನೇ ಪಾರ್ಟಿ ನಂ.2 ರವರನ್ನು ಪಾರ್ಟಿ ಮಾಡಲಾಗಿರುತ್ತದೆ ಎಂದರೆ ಸರಿ . ನಾವು ಎನ್ ಸಿ ಎಲ್ ಟಿ ಮುಂದೆ ಅರ್ಜಿ ನಂ.40 ನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ . ಸದರಿ ಅರ್ಜಿಯನ್ನು ಎನ್ ಸಿ ಎಲ್ ಟಿ ಯವರು ವಜಾ ಮಾಡಿರುತ್ತಾರೆ ಎಂದರೆ ಸರಿ . ನಮ್ಮನಲ್ಲದೇ 2 ನೇ ಪಾರ್ಟಿ ನಂ.1 ರವರಿಗೆ ಸಾಲವನ್ನು ನೀಡಿದವರೂ ಕೂಡ ಎನ್ ಸಿಎಲ್ ಟಿ ಮುಂದೆ ಪಾರ್ಟಿಯಾಗಿದ್ದರು ಎಂದರೆ ಸರಿ , ನಮ್ಮ ಬೇಡಿಕೆಗೆ ಪೂರಕವಾಗಿ ಎನ್ ಸಿ ಎಲ್ ಟಿ ಯವರು ವಿಷನ್ ಟೆಕ್ಸಟೈಲ್ಸ್ ರವರಿಗೆ 35 ಲಕ್ಷವನ್ನು ನೀಡುವಂತೆ ಆದೇಶಿಸಿರುತ್ತದೆ ಎಂದರೆ ಸರಿ . ಎನ್ ಸಿ ಎಲ್ ಟಿ ಮುಂದೆ ಪ್ರಕರಣವು ಬಾಕಿ ಇರಬೇಕಾದರೆ ನಾವು ಸ್ಟ್ರೈಕ್ ಮಾಡಿರುತ್ತೇವೆ ಎಂದರೆ ಸರಿ . ಆ ರೀತಿ ಸ್ಟ್ರೈಕ್ ಮಾಡಿದಾಗ ಆಡಳಿತ ವರ್ಗದವರು ನ್ಯಾಯಾಲಯ ಕ್ಕೆ ಹೋಗಿ ನಮ್ಮವಿರುದ್ದ ತಡೆಯಾಜ್ಞೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ . ಎನ್ ಸಿ ಎಲ್ ಟಿ ರವರು 2 ನೇ ಪಾರ್ಟಿ ನಂ.1 ನ್ನು ಲಿಕ್ವಿಡೇಟ್ ಆಗಬೇಕು ಎಂದು ಆದೇಶಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಡಿಎಲ್ ಸಿ ಅವರ ಮುಂದೆ ವಿವಾದ ಎತ್ತಿದಾಗ 2 ನೇ ಪಾರ್ಟಿ ನಂ.2 ರವರನ್ನು ಪಾರ್ಟಿ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ . ವಿಷನ್ ಟೆಕ್ಸಟೈಲ್ಸ್ ಮತ್ತು ನಮ್ಮ ಯೂನಿಯನ್ ನಡುವೆ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿ . ವಿಷನ್ ಟೆಕ್ಸಟೈಲ್ಸ್ ರವರು ನಮ್ಮನ್ನು ಕೆಲಸಕ್ಕೆ ತೆಗೆದುಕೊಂಡಿರುವುದಿಲ್ಲ ಹಾಗೂ ಸಂಬಳವನ್ನು ನೀಡಿರುವುದಿಲ್ಲ ಎಂದರೆ ಸರಿ , ನಾವು ಪರಿಹಾರವನ್ನು 2 ನೇ ಪಾರ್ಟಿ ನಂ.1 ರವರ ವಿರುದ್ದ ಕೇಳಿರುತ್ತೇವೆ 2 ನೇ ಪಾರ್ಟಿ ನಂ.2 ಮೇಲೆ ಕೇಳಿರುವುದಿಲ್ಲ ಎಂದರೆ ಸರಿಯಲ್ಲ . ಸಾಕ್ಷಿದಾರರು ಮುಂದುವರೆದು ಇಬ್ಬರಿದ್ದಲೂ ಪರಿಹಾರವನ್ನು ಕೇಳಿರುತ್ತೇವೆ ಎಂದು ನುಡಿಯುತ್ತಾರೆ . 2 ನೇ ಪಾರ್ಟಿ ನಂ.2 ರವರು ನಮಗೆ ಯಾವುದೇ ಪರಿಹಾರವನ್ನು ನೀಡಲು ಭಾದ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ 2 ನೇ ಪಾರ್ಟಿ ನಂ.1 ರವರು ಕಾರ್ಖಾನೆಗೆ ಬೀಗ ಮುದ್ರೆಯನ್ನು ಹಾಕಿದ ಸಮಯಕ್ಕೆ ಸಂಬಳವನ್ನು ನೀಡಬೇಕು ಎಂದು ಕೇಳಿರುತ್ತೇವೆ ಎಂದರೆ ಸರಿ . ನಾವು ಸ್ಟ್ರೈಕ್ ಮಾಡಿದ್ದರಿಂದ 2 ನೇ ಪಾರ್ಟಿ ನಂ.1 ರವರ ಲಾಕ್ ಔಟ್ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಸಾಕ್ಷಿದಾರರು ಮುಂದುವರೆದು ಸಂಬಳವನ್ನು ಕೇಳುವ ಮೊದಲೇ ಲಾಕ್ ಔಟ್ ಮಾಡಿದ್ದರು ಎಂದು ನುಡಿಯುತ್ತಾರೆ .

ನಾವು ಕೆಲಸ ಮಾಡದೇ ಸ್ಟ್ರಕ್ ಮಾಡಿದ್ದರಿಂದ ನಮಗೆ ಸಂಬಳವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ . ನಾನು ನೈಟ್ ಶಿಫ್ಟ್ ನಲ್ಲಿ ಕೆಲಸ ಮಾಡುತ್ತಿದ್ದೆ ಬೆಳಗಿನ ಜಾವದಲ್ಲಿ ಲಾಕ್ ಔಟ್ ಆಗಿರುತ್ತದೆ. 2 ನೇ ಪಾರ್ಟಿ ನಂ.1 ಸಂಸ್ಥೆಯು ಮೂರು ಶಿಫ್ಟ್ ನಲ್ಲಿ ನಡೆಯುತ್ತಿತ್ತು. ಹೊಸ ಶಿಫ್ಟ್ ನ ಕೆಲಸಗಾರರರು ಒಳಗೆ ಬಂದ ನಂತರ ಹಳೆ ಶಿಫ್ಟ್ ನ ಕೆಲಸಗಾರರರು ಹೊರಗೆ ಬರುತ್ತಿದ್ದರು ಎಂದರೆ ಸರಿ .ಹೊಸ ಶಿಫ್ಟ್ ನವರು ಹಳೆ ಶಿಫ್ಟ್ ನವರನ್ನು ರಿಲೀವ್ ಮಾಡುತ್ತಿದ್ದರು ಎಂದರೆ ಸರಿ . ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಲಾಕ್ ಔಟ್ ಮಾಡಲಾಗಿರುವುದಿಲ್ಲ ನಾವು ಕೆಲಸ ಮಾಡಿ ಹೊರಗೆ ಬಂದ ನಂತರ ಲಾಕ್ ಔಟ್ ಆಗಿರುತ್ತದೆ ಎಂದರೆ ಸರಿಯಲ್ಲ . 2 ನೇ ಪಾರ್ಟಿ ನಂ.1 ಸಂಸ್ಥೆಯಲ್ಲಿ land loosers ಸುಮಾರು 20 ರಿಂದ 25 ಇದ್ದರು . ಜನವರಿ 2013 ರಲ್ಲಿ 2 ನೇ ಪಾರ್ಟಿ ನಂ.1 ಯಲ್ಲಿ ಕೆಲಸ ಮಾಡಿರುವುದರ ಬಗ್ಗೆ ದಾಖಲಾತಿಯನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುತ್ತೇನೆ. ನಾನು 1 ನೇ ಪಾರ್ಟಿ ಯೂನಿಯನ್ ನ ಸದಸ್ಯ ಎಂದು ತೋರಿಸಲು ದಾಖಲಾತಿಗಳನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುತ್ತೇನೆ. 2 ನೇ ಪಾರ್ಟಿ ನಂ.1 ರವರು ಜನವರಿ 2013 ರಿಂದ ಲಾಕ್ ಔಟ್ ಮಾಡಿರುವುದಿಲ್ಲ ಆದುದರಿಂದ ಸಂಬಳವನ್ನು ನೀಡಲು ಭಾದ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ . 2 ನೇ ಪಾರ್ಟಿ ನಂ.2 ಮತ್ತು ಲಾಕ್ ಔಟ್ ಗೂ ಯಾವುದೇ ಸಂಬಂಧ ಇರದೇ ಇರುವುದಿರಿಂದ ಅವರೂ ಕೂಡ ಸಂಬಳವನ್ನು ನೀಡಲು ಭಾದ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪಾರ್ಟಿ ನಂ.2 ರವರು 2 ನೇ ಪಾರ್ಟಿ ನಂ .1 ಸಂಸ್ಥೆಯನ್ನು ಖರೀದಿಸುವುದರಿಂದ ಅವರು ಸಂಬಳವನ್ನು ನೀಡಲು ಭಾದ್ಯಸ್ಥರಾಗಿರುತ್ತಾರೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿ . 2 ನೇ ಪಾರ್ಟಿ ನಂ.2 ರವರು 2 ನೇ ಪಾರ್ಟಿ ನಂ .1 ಸಂಸ್ಥೆಯನ್ನು ಖರೀದಿಸಿದಾಗ 2 ನೇ ಪಾರ್ಟಿ ನಂ.1 ಸಂಸ್ಥೆಯು ಮುಚ್ಚಿತ್ತು ಎಂದರೆ ಸರಿ . 2 ನೇ ಪಾರ್ಟಿ ನಂ.1 ಮತ್ತು 2 ನೇ ಪಾರ್ಟಿ ನಂ.2 ರವರು ಯಾವುದೇ ವೇತನವನ್ನು ನೀಡಲು ಭಾದ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ ಜಡ್ಜ್
ಔಧ್ಯಮಿಕ ನ್ಯಾಯಾಧೀಕರಣ,
ಮೈಸೂರು.